ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1**

ಸಂಖ್ಯೆ:ಸಿ1(1)ನೌ.ಸೇ.ಆನ್ ಲೈನ್/01/2018–19 ದಿನಾಂಕ.16–04–2019

**–:ಅಧಿಕೃತ ಜ್ಞಾಪನ:–**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್–ಎ ಮತ್ತು ಬಿ ಅಧಿಕಾರಿಗಳು ಹಾಗೂ ಎಲ್ಲಾ ವೃಂದದ ಭೋಧಕ/ಭೋಧಕೇತರ ನೌಕರರ ಸೇವಾ ಸೌಲಭ್ಯಗಳನ್ನು ಆನ್ ಲೈನ್ ತಂತ್ರಾಂಶದ ಮೂಲಕ ಸೇವೆ ಒದಗಿಸುವ ಸಂಬಂಧ ನೋಡಲ್ ಅಧಿಕಾರಿಯಾಗಿ ನೇಮಿಸುವ ಬಗ್ಗೆ.

**ಉಲ್ಲೇಖ:** 1.ಈ ಕಛೇರಿಯ ಅಧಿಕೃತ ಜ್ಞಾಪನದ ಸಮ ಸಂಖ್ಯೆ ದಿನಾಂಕ: 08.04.2019

******

ಶಿಕ್ಷಣ ಇಲಾಖೆಯಲ್ಲಿನ ಪ್ರಮುಖ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ವಿವಿಧ ಸೇವೆಗಳನ್ನು ನಿಗಧಿತ ಅವಧಿಯೊಳಗೆ, ತ್ವರಿತವಾಗಿ ಒದಗಿಸಲು ಹಾಗೂ ಸೌಲಭ್ಯ ಒದಗಿಸುವ ವ್ಯವಸ್ಥೆಯನ್ನು ಸರಳೀಕರಣಗೊಳಿಸಲು ಮತ್ತು ಸಿಬ್ಬಂದಿಗಳ ದಕ್ಷತೆ ಮತ್ತು ಕಾರ್ಯ ತತ್ಪರತೆಯಲ್ಲಿ ಉತ್ಸಾಹ ಹೆಚ್ಚಿಸಲು ಈ ಕೆಳಕಂಡ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲು ಇಲಾಖೆ ನಿರ್ಣಯಿಸಿದೆ.

ಇಲಾಖೆಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಮಿತವ್ಯಯ ಸಾಧಿಸುವ ಅಂಶವನ್ನು ಪ್ರಸ್ತಾಪಿಸಿ. ಕೆಳಕಂಡ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ ಉಲ್ಲೇಖಿತ ಅಧಿಕೃತ ಜ್ಞಾಪನದಲ್ಲಿ ವಿಸ್ತಾರವಾದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

**<u>ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸುವ ಸೇವೆಗಳು:</u>**

1. ವಿವಿಧ ರಜಾ ಸೌಲಭ್ಯಗಳು, 2. ಪಾಸ್‌ಪೋರ್ಟ್ ಪಡೆಯಲು ಹಾಗೂ ವಿದೇಶ ಪ್ರವಾಸಕ್ಕೆ ನಿರಾಪೇಕ್ಷಣಾ ಪತ್ರ 3. ಶಿಸ್ತು ಪ್ರಕರಣಗಳು, 4. ಪ್ರಭಾರ ಭತ್ಯೆ ಮಂಜೂರಾತಿ, 5. ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ/ಅನುಮೋದನೆ 6. ಅರ್ಹತಾದಾಯಕ ಸೇವೆ ಸೇರ್ಪಡೆ, 7. ಕಾಲಮಿತಿ ವೇತನ ಬಡ್ತಿ/ಸ್ವಯಂ ಚಾಲಿತ ವೇತನ ಬಡ್ತಿ/20,25,30 ವರ್ಷಗಳ ಹೆಚ್ಚುವರಿ ಬಡ್ತಿ/ಸ್ಥಗಿತ ವೇತನ ಬಡ್ತಿ ಮಂಜೂರಾತಿ, 8. ಚರಾಸ್ತಿ ಮತ್ತು ಸ್ಥಿರಾಸ್ಥಿ ಖರೀದಿಸಲು ಅನುಮತಿ 9. ಉನ್ನತ ವ್ಯಾಸಂಗಕ್ಕೆ ಅನುಮತಿ, 10. ವಾರ್ಷಿಕ ಕಾರ್ಯನಿರ್ವಾಹಣಾವರದಿ

ಈ ಸಂಬಂಧ ಮೇಲ್ಕಂಡ ಸೇವೆಗಳನ್ನು ಆನ್‌ಲೈನ್ ಮೂಲಕ ವ್ಯವಹರಿಸುವ ಬಗ್ಗೆ ನಿರ್ಣಯಿಸಿರುವುದರಿಂದ ಈ ಸೇವೆಗಳ ತ್ವರಿತ ವಿಲೇವಾರಿ ಮತ್ತು ಪರಿಣಾಮಕಾರಿ ಅನುಷ್ಠಾನಗೊಳಿಸುವ ಸಲುವಾಗಿ ಮೇಲುಸ್ತುವಾರಿಯಾಗಿ ಈ ಕೆಳಕಂಡ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿ ಆದೇಶಿಸಿದೆ. ಉಲ್ಲೇಖಿತ ದಿನಾಂಕ: 08.04.2019ರ ಅಧಿಕೃತ ಜ್ಞಾಪನದಲ್ಲಿನ ಅಂಶಗಳನ್ನು ಪುನರುಚ್ಚರಿಸುತ್ತಾ ನೇಮಿಸಲಾದ ಅಧಿಕಾರಿಗಳು ಈ ಕೆಳಕಂಡಂತೆ ಕ್ರಮವಹಿಸಲು ನಿರ್ದೇಶನ ನೀಡಿದೆ.

- ಸಂಬಂದಿಸಿದ ನೋಡಲ್ ಅಧಿಕಾರಿಗಳು ವಹಿಸಿರುವ ಸೇವೆಯ ಪ್ರಸ್ತಾವನೆಯ ತಂತ್ರಾಂಶದಲ್ಲಿ ಸ್ವೀಕೃತಿಯಾಗುವ /ಇಲ್ಲದಿರುವ ಬಗ್ಗೆ ಆನ್‌ಲೈನ್‌ನಲ್ಲಿ ಪರಿಶೀಲಿಸುವುದು.
- ಸೇವೆಗಳನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಸ್ವೀಕೃತಿ ಕೇಂದ್ರದ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಬಳಕೆ/ಅನುಷ್ಠಾನದಲ್ಲಿ ತಾಂತ್ರಿಕ ಲೋಪಗಳು/ ಅಡೆತಡೆಗಳು ಸಂಬಂಧಿಸಿದಲ್ಲಿ ಸಂಬಂಧಿಸಿದ ರವರಿಗೆ ತಿಳಿಸಿ ಸರಿಪಡಿಸುವ ವ್ಯವಸ್ಥೆ ಮಾಡುವುದು.
- ಮುಂದುವರೆದು ಈ ಕುರಿತು ಉಂಟಾಗುವ ಗೊಂದಲ ಮತ್ತು ಸಮಸ್ಯೆಗಳನ್ನು ಸಕಾಲದಲ್ಲಿ ಗಮನಿಸಿ ಪರಿಹಾರೋಪಾಯ ಮಾರ್ಗವಾಗಿ ಸಂಬಂಧಿಸಿದ ಇ–ಗರ್ವನರ್ಸ್ / ತಾಂತ್ರಿಕ ನಿರ್ವಹಣೆ ತಂಡದ ಗಮನಕ್ಕೆ ತರುವುದು.

- ತಂತ್ರಾಂಶದಲ್ಲಿ ಬಳಕೆಯಾಗುತ್ತಿರುವ ಬಗ್ಗೆ/ಪ್ರಗತಿ ಕುರಿತು ಸಮಸ್ಯೆಗಳು ಪರಿಹಾರವಾಗಿದ್ದರೆ, ಆಗಿಂದಾಗೆ ಮಾನ್ಯ ಆಯುಕ್ತರಿಗೆ ಮಾಹಿತಿ ನೀಡುವುದು.
- ಒಟ್ಟಾರೆ ಮೇಲ್ಕಂಡ ಸೇವೆಗಳ ಅನುಷ್ಠಾನವನ್ನು ಕಾರ್ಯಗತಗೊಳಿಸುವ ಎಲ್ಲಾ ಜವಾಬ್ದಾರಿಯನ್ನು ಸಂಬಂಧಿಸಿದ ನೋಡಲ್ ಅಧಿಕಾರಿಗಳು ಮೇಲುಸ್ತುವಾರಿ ವಹಿಸಿ ಅನುಷ್ಠಾನ ಯಶಸ್ವಿಗೊಳಿಸುವುದು.

| ಕ್ರ ಸಂ | ಆನ್‌ಲೈನ್ ಸೇವೆಯ ವಿಷಯ | ನೇಮಿಸಲಾದ ನೊಡಲ್ ಅಧಿಕಾರಿಯ ಪದನಾಮ |
|---|---|---|
| 1 | ಪ್ರಭಾರ ಭತ್ಯೆ | ಉಪನಿರ್ದೇಶಕರು(ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 2 | ಆಸ್ತಿ ಖರೀದಿ | ಕಾರ್ಯಕ್ರಮಾಧಿಕಾರಿಗಳು, (ಯೋಜನೆ) ಸಮಗ್ರ ಶಿಕ್ಷಣ ಅಭಿಯಾನ, ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು |
| 3 | ಪಾಸ್‌ಪೋರ್ಟ್ /ವಿದೇಶ ಪ್ರವಾಸ ಅನುಮತಿ | ಕಾರ್ಯಕ್ರಮಾಧಿಕಾರಿಗಳು,(ಗುಣಮಟ್ಟ) ಸಮಗ್ರ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು. |
| 4 | ಹಿಂದಿನ ಸೇವೆ ಸೇರ್ಪಡೆ | ಉಪನಿರ್ದೇಶಕರು ಕೆ.ಎಸ್.ಕ್ಯೂ.ಎ.ಒ(ಕೆ.ಎಸ್.ಇ.ಇ.ಬಿ) ಬೆಂಗಳೂರು |
| 5 | ಪ್ರವಾಸ ಅನುಮೋದನೆ / ದಿನಚರಿ | ಉಪನಿರ್ದೇಶಕರು (ಸಂಸ್ಕೃತ) ಆಯುಕ್ತರ ಕಛೇರಿ, ಬೆಂಗಳೂರು |
| 6 | ವಾರ್ಷಿಕ ಕಾರ್ಯನಿರ್ವಹಣಾ ವರದಿ | ಉಪನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 7 | ಆಸ್ತಿ ಮತ್ತು ಋಣ ಪಟ್ಟಿ | ಉಪನಿರ್ದೇಶಕರು(ಯೋಜನೆ) ಆಯುಕ್ತರ ಕಛೇರಿ, ಬೆಂಗಳೂರು |
| 8 | ಶಿಸ್ತು ಪ್ರಕರಣಗಳು | ಹಿರಿಯ ಸಹಾಯಕ ನಿರ್ದೇಶಕರು ಇಎಸ್‌ಟಿ–1 ವಿಭಾಗ ಆಯುಕ್ತರ ಕಛೇರಿ ಬೆಂಗಳೂರು |
| 9 | ರಜೆ | ಹಿರಿಯ ಸಹಾಯಕ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |
| 10 | ಉನ್ನತ ವ್ಯಾಸಂಗ | ಹಿರಿಯ ಸಹಾಯಕ ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ, ಬೆಂಗಳೂರು |

**(ಡಾ|| ಎಂ.ಟಿ.ರೇಜು )**
**ಆಯುಕ್ತರು**

**ಇವರಿಗೆ**

1] ಸಂಬಂದಿಸಿದ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ

2] ಅಪರ ಆಯುಕ್ತರು ಧಾರವಾಡ/ಕಲಬುರಗಿ ರವರಿಗೆ ಈ ಮೂಲಕ ತಮ್ಮ ವ್ಯಾಪ್ತಿಯಲ್ಲಿನ ವಿಷಯಗಳಿಗೆ ಸಂಬಂಧಿಸಿದಂತೆ ಮೇಲ್ಕಂಡಂತೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಅಗತ್ಯ ಕ್ರಮವಹಿಸಲು ತಿಳಿಸಿದೆ.

**ಪ್ರತಿಯನ್ನು:**

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ಮಾಹಿತಿಗಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. ಕಛೇರಿ ಪ್ರತಿ